ಸಭೆಯ ಮುಂದೆ ತರಲಾಗುತ್ತಿದೆ. ಬಹುತೇಕ ಎಲ್ಲಾ ಮಂತ್ರಿಗಳೂ ಉತ್ತರಗಳನ್ನು ಕೊಡುತ್ತಿದ್ದಾರೆ. ಆದರೆ ನಿಮಗೆ ಇದರಿಂದ ಸಮಾಧಾನ ಇಲ್ಲ. ಅವರು ಉತ್ತರ ಕೊಟ್ಟಮೇಲೂ ಭರವಸೆಗಳನ್ನು ಕೊಟ್ಟಮೇಲೂ ಸಹ, ಭರವಸೆ ಸಮಿತಿ ಎಂದೂ ಒಂದು ಸಮಿತಿ ಇದೆ. ಈ ಸದನದಲ್ಲಿ ಕಾಲಕಾಲಕ್ಕೆ ಮಂತ್ರಿಗಳು ಕೊಟ್ಟ ಭರವಸೆ, ಆಶ್ವಾಸನೆ, ವಾಗ್ದಾನಗಳನ್ನು ಪರಾಮರ್ಶಿಸಲು ಮತ್ತು ಅಂತಹ ಭರವಸೆಗಳು, ಆಶ್ವಾಸನೆಗಳು, ವಾಗ್ದಾನಗಳು ಎಷ್ಟರಮಟ್ಟಿಗೆ ಕಾರ್ಯಗತವಾಗಿವೆ, ಕಾರ್ಯಗತವಾಗಿದ್ದರೆ, ಈ ಉದ್ದೇಶಕ್ಕಾಗಿ ಅಗತ್ಯವಾದ ಕನಿಷ್ಟ ಅವಧಿಯಲ್ಲಿ ಕಾರ್ಯಗತವಾಗಿದೆಯೇ ಎಂಬ ಬಗ್ಗೆ ವರದಿ ಮಾಡಲು ಸರಕಾರ ಭರವಸೆಗಳ ಸಮಿತಿ ಇರತಕ್ಕದ್ದು ಇದೆ. ಪ್ರತಿವರ್ಷ ಈ ಸದನದಿಂದ ಚುನಾವಣೆ ಮಾಡಿ ಈ ಸಮಿತಿಗೆ ಎಲ್ಲಾ ಪಕ್ಷದವರನ್ನೂ ನೇಮಿಸಿ ಈ ಕಮಿಟಿ ಮಾಡುತ್ತೇವೆ. ಇದರಲ್ಲಿ ಎಂಟು ಜನ ಸದಸ್ಯರು ಇರುತ್ತಾರೆ. ನಾಲ್ಕು ಜನ ಜನತಾ ಪಕ್ಷದವರೂ, ೩ ಜನ ಕಾಂಗ್ರೆಸ್ ಪಕ್ಷದವರೂ ಒಬ್ಬರು ಇಂಡಿಪೆಂಡೆಂಟ್ ಸದಸ್ಯರು ಈ ಸಲ ಈ ಸಮಿತಿಯಲ್ಲಿದ್ದಾರೆ. ಮಾನ್ಯ ಬಿ. ಜಿ. ಕೊಟ್ರುಪ್ಪನವರು ಇದರ ಅಧ್ಯಕ್ಷರು ಶ್ರೀ ಇ. ನಂಜೇಗೌಡರು, ಶ್ರೀಮತಿ ಶಕುಂತಲಾ ಚಾಗಲೆಯವರು, ಶ್ರೀ ಕೆ ಆರ್. ಶ್ರೀನಿವಾಸಯ್ಯನವರು ಜನತಾ ಪಕ್ಷದವರು, ಶ್ರೀ ಎ. ಕೃಷ್ಣಪ್ಪನವರು, ಶ್ರೀ ಶಿವಶೇಖರಪ್ಪಗೌಡ ಮತ್ತು ಶ್ರೀಮತಿ ಪಂಕಜಾ ರುನ್ನಿಸಾ ಅವರು ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ಶ್ರೀ ಜಿ.ರಾಜೂಗೌಡರು ಇಂಡಿಪೆಂಡೆಂಟ್ ಸದಸ್ಯರು.ಈ ಸಮಿತಿಯವರಿಗೆ ನಾನು ಹೇಳಿದ್ದೇನೆ. ತಿಂಗಳಿಗೆ ಮೂರು ಮೀಟಿಂಗ್ ಕರೆಯಿರಿ ನಾಲ್ಕು ಸಲ ಬೇಕಾದರೂ ಕರೆಯಿರಿ. ಬೆಳಿಗ್ಗೆ ೧೧ ಗಂಟೆಯಿಂದ ಸಾಯಂಕಾಲ ೫ ಗಂಟೆಯವರೆಗೆ ಕುಳಿತುಕೊಳ್ಳಿ. ಇಲ್ಲಿ ಕೊಟ್ಟಂಥ ಅಷ್ಯೂರೆನ್ಸ್‌ಗಳು ಎಷ್ಟರಮಟ್ಟಿಗೆ ಈಡೇರಿವೆ ನೋಡಿರಿ. ಈಡೇರದೇ ಇದ್ದರೆ ಕರೆಸ್ಪಾಂಡೆನ್ಸ್ ಮಾಡಿ ಅದಷ್ಟು ಈಡೇರಿಸಲಿಕ್ಕೆ ಪ್ರಯತ್ನ ಮಾಡಿ. ಸದಸ್ಯರಿಗೆ ತೊಂದರೆಯಾಗಬಾರದು ಎಂದು ಹೇಳಿದ್ದೇನೆ. ಇಲ್ಲೆಲ್ಲಾ ತಕರಾರು ಮಾಡುವ ಬದಲು ಅಲ್ಲಿ ನೀವೇ ಅಷ್ಯೂರೆನ್ಸ್ ಕಮಿಟಿಯಲ್ಲಿ ಹೋಗಿ ನೋಡಿ- ಎಂಟೂ ದಿವಸ ಹದಿನೈದು ದಿವಸಕ್ಕೆ ಅಷ್ಯೂರೆನ್ಸ್ ಕಮಿಟಿಯಲ್ಲಿ ಹೋಗಿ ನೋಡುತ್ತಾ ಇರಿ. ಮೀಟಿಂಗ್ ನಡೆಯುತ್ತಿರಂತ್ತದೆ. ಇಲ್ಲಿ ೩೫ನೇ ನಿಯಮದ ನೋಟೀಸ್ ಬಂದಾಗ ಯಾರೂ ಅದರ ಬಗ್ಗೆ ಅದು ಬಂದಿಲ್ಲ ಇದು ಬಂದಿಲ್ಲ. ಎಂದು ಹೇಳಬಾರದು. ಏನಾದರೂ ತೊಂದರೆಯಾಗಿದ್ದರೆ ಅಷ್ಯೂರೆನ್ಸ್ ಕಮಿಟಿಗೆ ಹೋಗಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅಷ್ಯೂರೆನ್ಸ್ ಕಮಿಟಿಯಲ್ಲಿ ಯಾವ ಮಂತ್ರಿಗಳು ತಮ್ಮ ಭರವಸೆಯನ್ನು ಈಡೇರಿಸಿಲ್ಲ, ಆ ಮಂತ್ರಿಗಳ ಬಗ್ಗೆ ತರಾಟೆಗೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಬಹುತೇಕ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ರಘುಪತಿ (ವಿಧಾನಸಭಾಕಾರ್ಯದರ್ಶಿಗಳು ಮತ್ತು ಬಂದರು ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಬಹುತೇಕ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡುತ್ತಿದ್ದೇವೆ. ಅಧಿವೇಶನ ಮುಗಿದ ಮೇಲೆ ಯಾವ ಯಾವುದಕ್ಕೆ ಉತ್ತರ ಬಂದಿಲ್ಲ ಅದಕ್ಕೆ ತಮ್ಮ ಕಛೇರಿಯಿಂದ ಪತ್ರ ಬರೆದಿದ್ದೀರಿ. ಸಂಬಂಧಪಟ್ಟ ಮಂತ್ರಿಗಳಿಗೆ ಅದನ್ನು ಕಳುಹಿಸಿ ಎಷ್ಟು ಉತ್ತರಗಳನ್ನು ಒದಗಿಸಿ ಕೊಡಲಿಕ್ಕೆ ಸಾಧ್ಯವೋ ಅಷ್ಟೂ ಪ್ರಯತ್ನ ಮಾಡಿ ಒದಗಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.—ಬಹುತೇಕ ಉತ್ತರ ಕೊಟ್ಟಿದ್ದಾರೆ ಅದನ್ನು ಬಿಟ್ಟು ಸಂಭ್ರಮನೆ ಟೀಕೆ ಮಾಡುವುದು ನಿಮ್ಮ ಕೆಲಸ. We must thank the Government. You have done maximum help to all the Members.

ಶ್ರೀ ವಲ್ಲಾರಿಗೌಡ ಎಸ್. ಪಾಟೀಲ್.—ಸರಕಾರ ಒಳ್ಳೆಯ ಕೆಲಸ ಮಾಡಿದ್ದರೆ ಆ ರೀತಿ ಮಾಡುವುದಿಲ್ಲ.

ವಿಶೇಷ ನಿರ್ಣಯ

ವಿಧಾನಮಂಡಲದ ಕಾರ್ಯದರ್ಶಿಯಾಗಿ ನಿವೃತ್ತಿ ಹೊಂದಿದ ಶ್ರೀ ಕೆ. ಎಸ್ ಸಿಂಗರೀಗೌಡರ ಸೇವೆಯ ಪ್ರಶಂಸೆ ಮಾಡಿ ನಿರ್ಣಯ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಹಿಂದಿನ ಅಧಿವೇಶನದವರೆವಿಗೂ ನಮ್ಮ ವಿಧಾನ ಮಂಡಲದಲ್ಲಿ ಕಾರ್ಯದರ್ಶಿಗಳಾಗಿ ಕೆಲಸ ಮಾಡಿ ನಿವೃತ್ತರಾದಂಥ ಶ್ರೀ ಕೆ. ಎಸ್. ಸಿಂಗರಿಗೌಡರವರ

ಸೇವೆಯನ್ನು ಸ್ಮರಿಸಿ ಒಂದು ವಿಶೇಷ ನಿರ್ಣಯವನ್ನು ನಾನು ಈ ಮನೆಯ ವಂದಿಂದೆ ತರುವುದಕ್ಕೆ ಅಪೇಕ್ಷೆಪಡುತ್ತೇನೆ. ಈ ನಿರ್ಣಯವನ್ನು ಮಾನ್ಯ ಸದಸ್ಯರೆಲ್ಲರೂ ಒಮ್ಮತದಿಂದ ಪಾಸ್ ಮಾಡುತ್ತ ರೆಂದು ಆಸೆ ಮಾಡುತ್ತೇನೆ.

"ದಿನಾಂಕ ೩೧ನೇ ಅಕ್ಟೋಬರ್ ೧೯೮೭ರಂದು ವಿಧಾನ ಮಂಡಲದ ಕಾರ್ಯದರ್ಶಿ ಸ್ಥಾನದಿಂದ ನಿವೃತ್ತಿಹೊಂದಿದ ಶ್ರೀ ಕೆ. ಎಸ್. ಸಿಂಗರಿಗೌಡ ಅವರು ತಮ್ಮ ಸೇವಾ ಅವಧಿಯಲ್ಲಿ ಸದನಕ್ಕೆ ಹಾಗೂ ಪಾರ್ಲಿಮೆಂಟರಿ ಪರಂಪರೆಗೆ ನೀಡಿದ ಉತ್ತಮ ಸೇವೆಗಾಗಿ, ಅಧ್ಯಕ್ಷರ, ಸರ್ಕಾರದ ಹಾಗೂ ವಿಧಾನ ಸಭೆಯ ಸದಸ್ಯರ ಮೆಚ್ಚುಗೆಯನ್ನ ದಾಖಲು ಗೊಳಿಸಿ, ಅದನ್ನು ಅವರಿಗೆ ತಿಳಿಸಂವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಬೇಕೆಂದು ಈ ಸದನವು ನಿರ್ಣಯಿಸುತ್ತದೆ.

ಅಧ್ಯಕ್ಷರು.—ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಎರಡು ನಿಮಿಷ ಮಾತನಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಈ ಸದನಕ್ಕೆ ಒಂದು ಇತಿಹಾಸವಿದೆ. ತನ್ನದೇ ಆದಂತಹ ಒಂದು ಪರಂಪರೆ ಇದೆ. ಈ ಸದನದ ಕಾರ್ಯಕಲಾಪಗಳು ನಡೆಯುವಾಗ ಸತತವಾಗಿ ಹಾಜರಿದ್ದು ಎಂತಹ ಬಿಕ್ಕಟ್ಟಿನ ಪರಿಸ್ಥಿತಿಯಾಂಟಾದರೂ ಸಹ ಸರಿಯಾದ ರೀತಿಯಲ್ಲಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಆಗಾಗ ಸಲಹೆಗಳನ್ನು ಕಾರ್ಯದರ್ಶಿಗಳು ಕೊಡತಕ್ಕಂಥಾದ್ದು ಅವರ ಕರ್ತವ್ಯ. ಆದರೆ ಮಾನ್ಯ ಸಿಂಗರಿಗೌಡರು ವಿಶೇಷವಾದಂಥ ತಮ್ಮದೆ ಆದ ಶೈಲಿಯಲ್ಲಿ ಅಜಾತಶತ್ರುವಾಗಿದ್ದರು. ಅವರ ವರ್ತನೆಯ ಬಗ್ಗೆಯಾಗಲಿ, ಅವರ ಸಲಹೆ ಬಗ್ಗೆಯಾಗಲಿ ಎಂದೂ ಯಾವ ರೀತಿಯಲ್ಲೂ ಟೀಕೆ ಮಾಡಿದ್ದನ್ನು ಯಾರೂ ಕಂಡಿಲ್ಲಿಲ್ಲ ಅವರು ತಮ್ಮ ಸೇವಾವಧಿಯಲ್ಲಿ ಅನೇಕ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಅಪಾರವಾದ ಅನುಭವವನ್ನು ಪಡೆದುಕೊಂಡಿದ್ದಾರೆ, ಅವರ ಸೇವೆ ಈ ರಾಜ್ಯಕ್ಕೆ ಬೇರೆ ರೀತಿಯಲ್ಲಿ ಮುಂದೆ ಸಿಗಬಹುದೆಂದೂ ನಾನು ಆಸೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ನಿರ್ಣಯ ವನ್ನು ನಾನು ಅನುಮೋದಿಸುತ್ತಾ ನಾನು ಕೆಲವು ಮಾತನ್ನಾಡಬಯಸುತ್ತೇನೆ. ಮಾನ್ಯ ಸಿಂಗರಿಗೌಡರು ನನಗೆ ಸುಮಾರು ವರ್ಷಗಳಿಂದ ಪರಿಚಯವಿದ್ದವರು. ಅವರು ಬಹಳ ಒಳ್ಳೆಯ ರೀತಿಯಿಂದ ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದರು. ಅಲ್ಲದೆ ಸಮಯಕ್ಕೆ ಸರಿಯಾಗಿ ಯಾವ ರೂಲ್ಸ್ ಗಳನ್ನು ಬೇಕಾದರೂ ತಂದು ಇಂಟರ್‌ಪ್ರಿಟೇಶನ್ಸ್ ಮಾಡುತ್ತಿದ್ದರು. ಮಾನ್ಯ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಉತ್ತಮ ರೀತಿಯಲ್ಲಿ ಸಲಹೆಯನ್ನು ಕೊಡುತ್ತಿದ್ದರು. ಅವರು ಬಹಳ ಮೃದುಸ್ವಭಾವ ದವರು ಒಳ್ಳೆಯ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದಾರೆ,

ಅವರಂ ಜಾಯಿಂಟ್ ಸೆಕ್ರೆಟರಿ ಇದ್ದಾಗಿನಿಂದಲ್ಲೂ ನೋಡುತ್ತಿದ್ದೇನೆ, ನಾನು ಹೊಸದಾಗಿ ಸದಸ್ಯನಾಗಿ ಬಂದಾಗ, ನನಗೆ ಬೇಕಾದ ಮಾಹಿತಿಗಳನ್ನು ಒದಗಿಸಿಕೊಡುತ್ತಿದ್ದರು. ನಾನು ಅವರ ಜೊತೆಯಲ್ಲಿ ಒಳ್ಳೆಯ ಸಂಪರ್ಕವನ್ನು ಇಟ್ಟುಕೊಂಡಿದ್ದೆ. ಈ ಮನೆಯ ಕಾರ್ಯ ಕಲಾಪಗಳು ಸುಗಮ ವಾಗಿ ನಡೆದುಕೊಂಡು ಹೋಗುವುದಕ್ಕೆ ಅವರು ಸಹಾಯಕರಾಗಿದ್ದರು. ಇವತ್ತು ಅವರು ನಿವೃತ್ತ ರಾಗಿದ್ದಾರೆ. ನಿವೃತ್ತರಾಗಿ ಒಳ್ಳೆಯ ಹೆಸರನ್ನು ಕೂಡ ಪಡೆದುಕೊಂಡಿದ್ದಾರೆ. ಅವರ ಸೇವೆಯನ್ನು ಇನ್ನೂ ಯಾವುದಾದರೂ ರೂಪದಲ್ಲಿ ನಾವು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೆಂದು ಮಾನ್ಯ ಮುಖ್ಯ ಮಂತ್ರಿಯವರೂ ಸಹ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳ ಬಯಸುತ್ತೇನೆ. ಅವರು ವಿಧಾನ ಮಂಡಲಕ್ಕೆ ಒಳ್ಳೆಯ ಸೇವೆಯನ್ನು ಸಲ್ಲಿಸಿದ್ದಾರೆ. ಅವರಿಗೆ ದೇವರು ಇನ್ನೂ ಆಯುರ್ ಆರೋಗ್ಯಗಳನ್ನು ಕೊಟ್ಟು ಇನ್ನೂ ಅವರು ಒಳ್ಳೆಯ ಕೆಲಸ ಮಾಡಲಿಕ್ಕೆ ಅವಕಾಶ ವಾಗಲಿ ಎಂದೂ ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ. ಮಾನ್ಯ ಸಿಂಗರಿಗೌಡರನ್ನು ನಾನು ಅನೇಕ ವರ್ಷಗಳಿಂದ ಬಲ್ಲೆ. ನನಗೆ ತಿಳಿದ ಮಟ್ಟಿಗೆ ಸಂಸದೀಯ ವ್ಯವಹಾರಗಳಲ್ಲಿ ಅದರಲ್ಲೂ ಮುಖ್ಯ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಾಗಿ ವಿಧಾನ ಸಭೆಯಲ್ಲಿ ಬಹಳ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದರು. ನನಗೆ ತಿಳಿದ ಹಾಗೆ ಅವರು ಒಂದು ಕಳವಳವನ್ನು ವ್ಯಕ್ತಪಡಿಸುತ್ತಿದ್ದರು. ಅದೇನೆಂದರೆ, ಈ ಸದನದ ಸಮಯವನ್ನು ಸದಸ್ಯರು ಗಳು ಎಷ್ಟು ಪರಿಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೋ, ಎಷ್ಟು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬೇಕೋ ಅಷ್ಟು ಪ್ರಮಾಣದಲ್ಲಿ ಉಪಯೋಗಿಸುತ್ತಿಲ್ಲವೆಂದು ಅನೇಕ ಸಾರಿ ನನ್ನ ಹತ್ತಿರ ಹೇಳುತ್ತಿದ್ದರು. ನಾವೂ ಸಹ ಅನೇಕ ಸಂದರ್ಭಗಳಲ್ಲಿ ಅನೇಕಾನೇಕ ಚರ್ಚೆಗಳು, ವಿಧವಿಧವಾದ ಚರ್ಚೆಗಳನ್ನು ಹಲವಾರು ರೀತಿಯಲ್ಲಿ ಮಾಡುತ್ತಿದ್ದೇವೆ. ಯಾವ ಚರ್ಚೆಗೆ ಪ್ರಾತಿನಿಧ್ಯ ಕೊಡಬೇಕೂ, ಯಾವ ವಿಷಯಕ್ಕೆ ಪ್ರಾತಿನಿಧ್ಯ ಕೊಡಬೇಕೆಂದು ತಿಳಿದುಕೊಂಡು ಕೆಲಸ ಮಾಡುವುದು ಬಹಳ ಒಳ್ಳೆಯದು. ನಾನು ಇಷ್ಟು ಮಾತ್ರ ಹೇಳುತ್ತೇನೆ. ಮಾನ್ಯ ಸಿಂಗರಿಗೌಡರು ನಮಗೆ ಅನೇಕ ರೀತಿಯಲ್ಲಿ ಸೂಚನೆ ಹಾಗೂ ಸಲಹೆಗಳನ್ನು ಕೊಡುತ್ತಿದ್ದರು. ನಾನು ಅವರ ರೂಮ್‌ಗೆ ಭೇಟಿ ಕೊಟ್ಟಾಗಲೂ ಸಹ ನನ್ನ ಹತ್ತಿರ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಇವೊತ್ತಿನ ದಿವಸ ಇವರು ರಿಟೈರ್ ಆಗಿದ್ದಾರೆ. ನನಗನಿಸಿದ ಹಾಗೆ ಅವರ ಸೇವೆಯನ್ನು ಇನ್ನೂ ಉಪಯೋಗ ಮಾಡಿಕೊಳ್ಳಬೇಕು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರೂ ಸಹ ಹೇಳಿದ್ದಾರೆ. ಅವರಿಗೆ ಒಳ್ಳೆಯ ಸದ್ಗುಣಗಳಿದ್ದವು. ಅವರಿಗೆ ಇನ್ನೂ ಒಳ್ಳೆಯ ಕೆಲಸ ಮಾಡುವುದಕ್ಕೆ ದೇವರು ಶಕ್ತಿ ಕೊಡಲೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ — ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರು ಹೇಳಿದ ಹಾಗೆ ಸಿಂಗರಿಗೌಡರು ಬಹಳ ಮೃದು ಸ್ವಭಾವದವರು. ಎಷ್ಟು ಕೆಲಸ ಇದ್ದರೂ ಬೇಸರಪಟ್ಟುಕೊಳ್ಳದೆ ಸಂತೋಷದಿಂದ ಮಾಡುತ್ತಿದ್ದರು. ಯಾವ ಸದಸ್ಯರಾದರೂ ಅವರ ಹತ್ತಿರ ಹೋದರೆ ಸರಿಯಾದ ಸಲಹೆಗಳನ್ನು ಕೊಡುತ್ತಿದ್ದರು. ನಿಜವಾಗಿ ಅವರು ನಿಗರ್ವಿ. ಅಂಥವರ ಸೇವೆ ಬಹಳ ಆಗತ್ಯವಾಗಿತ್ತು. ಇನ್ನೂ ಏನಾದರೂ ಅವರ ಸೇವೆಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದ್ದರೆ, ಉಪಯೋಗಿಸಿಕೊಳ್ಳಬೇಕೆಂದು ಹೇಳಿ ಈ ರೆಸೆಲ್ಯೂಷನ್‌ನ್ನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು ಪ್ರಸ್ತಾಪ ಏನೆಂದರೆ.— "ದಿನಾಂಕ ೩೧ನೇ ಆಕ್ಟೋಬರ್ ೧೯೮೭ರಂದು ವಿಧಾನ ಮಂಡಲದ ಕಾರ್ಯದರ್ಶಿ ಸ್ಥಾನದಿಂದ ನಿವೃತ್ತಿ ಹೊಂದಿದ ಶ್ರೀ ಕೆ ಎಸ್. ಸಿಂಗರಿಗೌಡ ಅವರು ತಮ್ಮ ಸೇವಾ ಅವಧಿಯಲ್ಲಿ ಸದನಕ್ಕೆ ಹಾಗೂ ಪಾರ್ಲಿಮೆಂಟರಿ ಪರಂಪರೆಗೆ ನೀಡಿದ ಉತ್ತಮ ಸೇವೆಗಾಗಿ ಅಧ್ಯಕ್ಷರ, ಸರ್ಕಾರದ ಹಾಗೂ ವಿಧಾನ ಸಭೆಯ ಸದಸ್ಯರ ಮೆಚ್ಚುಗೆಯನ್ನು ದಾಖಲುಗೊಳಿಸಿ ಅದನ್ನು ಅವರಿಗೆ ತಿಳಿಸುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಬೇಕೆಂದು ಈ ಸದನವು ನಿರ್ಣಯಿಸುತ್ತದೆ.

(ನಿರ್ಣಯವನ್ನು ಅಂಗೀಕರಿಸಲಾಯಿತು)

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪ

ಅಧ್ಯಕ್ಷರು.— ಜನವರಿ ೨೦ ೧೯೮೮ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ."

ಶ್ರೀ ಪಿ.ಎಂ ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರು ದಿನಾಂಕ ೨೦-೧-೧೯೮೮ ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣಕ್ಕಾಗಿ ವಿಧಾನ ಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಲು ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

ಅಧ್ಯಕ್ಷರು.— ಮಾನ್ಯ ರಮೇಶ್‌ಕುಮಾರ್‌ರವರು ಅನುಮೋದಿಸುವುದು.

ಶ್ರೀ ರಮೇಶ್ ಕುಮಾರ್.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಪಿ. ಎಂ. ಚಿಕ್ಕ ಬೋರಯ್ಯನವರು ರಾಜ್ಯಪಾಲರ ಭಾಷಣಕ್ಕೆ ಮಂಡಿಸಿದ ವಂದನಾರ್ಪಣ ಪ್ರಸ್ತಾಪವನ್ನು ಅನು ಮೋದಿಸುತ್ತೇನೆ.